ದಿ.18.03.2021 ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋಧಿಸಲಾಯ್ತು.

**ಪಾಟೀ ಸವಾಲುಃ ಆರೋಪಿ-4, 15 ರಿಂದ 19 ಪರ ವಕೀಲರಿಂದಃ** ಗೋವಿಂದರಾಜು ಮತ್ತು 17ನೇ ಆರೋಪಿ ವೆಂಕಟೇಶ ಅಣ್ಣತಮ್ಮಂದಿರು **(**ದಿಃ18.02.2021ರ ಪಾಟೀ ಸವಾಲಿನಲ್ಲಿ ಆರೋಪಿ 7 ಬೈರೆಗೌಡ ಎಂದು ನಮೂದಾಗಿದ್ದು ಆರೋಪಿ 17 ವೆಂಕಟೇಶ ಎಂದು ನಮೂದಾಗಬೇಕಾಗಿರುತ್ತದೆ**).** ನನ್ನ ತಂದೆಗೆ ನಾನು, ಗುರಮ್ಮ, ಚಾಸಾ-4 ನಾರಾಯಣಸ್ವಾಮಿ ಮೂವರು ಮಕ್ಕಳು. ಸದರಿ ಜಮೀನನ್ನು ನಮ್ಮ ಸ್ವಾಧೀನಕ್ಕೆ ಪಡೆಯಲು ನಾನು ಮತ್ತು ಚಾಸಾ-4 ನಾರಯಣಸ್ವಾಮಿ, ಚಿಕ್ಕವೆಂಕಟರಾಯಪ್ಪ ಸೇರಿ ದಾಖಲಾತಿಗಳನ್ನು ಸೃಷ್ಟಿ ಮಾಡಿದ ವಿಚಾರ ಗೊತ್ತಿಲ್ಲ, ಎ18 ಹಾಗೂ 19ನ ತಂದೆ ದೊಡ್ಡಹನುಮಪ್ಪ ನನ್ನ ತಂದೆ ನಾರಾಯಣಸ್ವಾಮಿ, ದೊಡ್ಡಚಿನ್ನಪ್ಪ ಮತ್ತು ಚಿಕ್ಕವೆಂಕಟರಾಯಪ್ಪನ ವಿರುದ್ದ ಪ್ರಕರಣ ದಾಖಲು ಮಾಡಿದ ವಿಚಾರ ನನಗೆ ಗೊತ್ತಿಲ್ಲ.(ದಿಃ18.02.2021ರ ಪಾಟೀ ಸವಾಲಿನಲ್ಲಿ ಮೇಲೆ ಹೇಳಿದ ಬದಲಾವಣೆಗಳು ನಮೂದಾಗಬೇಕಾಗಿರುತ್ತವೆ).

ಶ್ರೀನಿವಾಸ ದಿಃ16.11.2007ರಂದು ಪಿಸಿಆರ್ 104-2007ನ್ನು ದೇವನಹಳ್ಳಿ ಜೆಎಂಎಫ್‌ಸಿ ನ್ಯಾಯಾಲದಲ್ಲಿ ಮುನಿರಾಜಪ್ಪ, ನಾರಾಯಣಸ್ವಾಮಿ ಮತ್ತು ವೆಂಕಟಮ್ಮರವರ ವಿರುದ್ದ ಸರ್ವೆ ನಂಬರ್ 46ಕ್ಕೆ ಸಂಬಂಧಿಸಿದಂತೆ ದಾಖಲು ಮಾಡಿದ ವಿಚಾರ ಗೊತ್ತಿಲ್ಲ. ಸದರಿ ಖಾಸಗಿ ದೂರು ಕ್ರೈಂ ನಂ.274-2007ರಲ್ಲಿ ಮುನಿರಾಜಪ್ಪ, ನಾರಾಯಣಸ್ವಾಮಿ ಮತ್ತು ವೆಂಕಟಮ್ಮರವರ ವಿರುದ್ದ ಪ್ರಕರಣ ದಾಖಲಾದ ವಿಚಾರ ಗೊತ್ತಿಲ್ಲ. ದಿಃ19.2.2010ರಂದು ವೆಂಕಟೇಶ, ನಾರಾಯಣಸ್ವಾಮಿ, ಮುನಿರಾಜು, ಮಂಜು ಮತ್ತು ಮುನಿಯಮ್ಮರವರ ವಿರುದ್ದ ಪ್ರಕರಣ ದಾಖಲು ಮಾಡಿದ್ದು ಕ್ರೈಂ ನಂ.15-2010 ದಾಖಲಾಗಿತ್ತು ಎಂದರೆ ಗೊತ್ತಿಲ್ಲ.

ದಿಃ24.09.2015ರಂದು ಕೃಷ್ಣಮ್ಮರವರು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ, ನನ್ನ ಹಾಗೂ ನನ್ನ ಪತ್ನಿ ಮತ್ತು ನಾರಾಯಣಸ್ವಾಮಿ, ವೆಂಕಟಮ್ಮ ಹಾಗೂ ಗುರಮ್ಮರವರ ವಿರುದ್ದ ದೂರು ದಾಖಲು ಮಾಡಿದ್ದು ಕ್ರೈಂ ನಂ.234-2015 ಎಂದು ದಾಖಲಾಗಿದ್ದು ಸದರಿ ಪ್ರಕರಣದಲ್ಲಿ ದೋ.ಪಟ್ಟಿ ಸಿಸಿ 3284-2015 ಹಾಜರುಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ.

ದಿಃ11.02.2016ರಂದು ಮಮತರವರು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ, ನನ್ನ ಹಾಗೂ ನನ್ನ ಪತ್ನಿ ಮತ್ತು ನಾರಾಯಣಸ್ವಾಮಿ, ಮುನಿರಾಜು, ವೆಂಕಟಮ್ಮ ಹಾಗೂ ಗುರಮ್ಮರವರ ವಿರುದ್ದ ದೂರು ದಾಖಲು ಮಾಡಿದ್ದು ಕ್ರೈಂ ನಂ.48-2016 ಎಂದು ದಾಖಲಾಗಿದ್ದು ಸದರಿ ಪ್ರಕರಣದಲ್ಲಿ ದೋ.ಪಟ್ಟಿ ಸಿಸಿ 4729-2016 ಹಾಜರುಪಡಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣ ಈಗಲೂ ತನಿಖೆಗೆ ಬಾಕಿ ಇದ್ದು ದಿಃ28.06.2021ಕ್ಕೆ ವಿಚಾರಣಾ ದಿನಾಂಕ ನಿಗದಿಯಾಗಿರುತ್ತದೆ ಎಂದರೆ ಗೊತ್ತಿಲ್ಲ.

4 ಮತ್ತು 17ನೇ ಆರೋಪಿಯ ತಂದೆ ಗುರುಮೂರ್ತಿ, 6ನೇ ಆರೋಪಿ ಶಾಂತಕುಮಾರ, ನನ್ನ ತಾಯಿ ವೆಂಕಟಮ್ಮ ಮತ್ತು ನನ್ನ ತಮ್ಮ ನಾರಾಯಣಸ್ವಾಮಿರವರ ವಿರುದ್ದ ದಾಖಲಾತಿ ತಿದ್ದುಪಡಿ ಮಾಡಿರುತ್ತಾರೆ ಎಂದು ದೂರು ದಾಖಲು ಮಾಡಿರುವ ವಿಚಾರ ಗೊತ್ತಿಲ್ಲ.

15ನೇ ಆರೋಪಿಯ ಸಂಬಂಧಿಕರಾದ ವೆಂಕಟೇಶವರು ನನ್ನ, ನನ್ನ ತಾಯಿ ಮತ್ತು ನನ್ನ ತಮ್ಮ ನಾರಾಯಣಸ್ವಾಮಿರವರ ವಿರುದ್ದ ದಾಖಲಾತಿಗಳನ್ನು ಫೋರ್ಜರಿ ಮಾಡಿರುತ್ತಾರೆ ಎಂದು ದೂರು ದಾಖಲು ಮಾಡಿದ್ದು ಕ್ರೈಂ ನಂ.28-2017 ಎಂದು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ.

15ನೇ ಆರೋಪಿಯ ಸಂಬಂಧಿಕರಾದ ಡಿಕೆ ರಾಜಣ್ಣ ನನ್ನ, ಹಾಗೂ ನನ್ನ ತಮ್ಮ ನಾರಾಯಣಸ್ವಾಮಿರವರ ವಿರುದ್ದ ದಾಖಲಾತಿಗಳನ್ನು ಫೋರ್ಜರಿ ಮಾಡಿರುತ್ತಾರೆ ಎಂದು ದೂರು ದಾಖಲು ಮಾಡಿದ್ದು ಕ್ರೈಂ ನಂ.30-2017 ಎಂದು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ.

ದಿ:20.08.2018ರಂದು 15ನೇ ಆರೋಪಿಯ ಬಾಮೈದುನ ಚಂದ್ರು, ನನ್ನ, ನನ್ನ ತಮ್ಮ, ಮುನಿಕೃಷ್ಣ, ಮಂಜುನಾಥ, ಶ್ರೀಕಂಠ, ನನ್ನ ತಂಗಿ ಗುರಮ್ಮ, ಮಂಜಮ್ಮ ಹಾಗೂ ಇತರೆ ಇಪ್ಪತ್ತು ಜನರ ವಿರುದ್ದ ದೂರು ದಾಖಲು ಮಾಡಿದ್ದು ಕ್ರೈಂ ನಂ.173-2018 ಎಂದು ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಒಂದು ತಿಂಗಳು ನಾವೆಲ್ಲಾ ಆರೋಪಿಗಳು ಜೈಲಿನಲ್ಲಿ ಇದ್ದೆವು ಎಂದರೆ ಗೊತ್ತಿಲ್ಲ. ಈ ಪ್ರಕರಣ ಈಗಲೂ ತನಿಖೆಗೆ ಬಾಕಿ ಇದ್ದುನಾನು ಹಾಜರಾಗುತ್ತಿದ್ದೇನೆ ಎಂದರೆ ಗೊತ್ತಿಲ್ಲ.

15ನೇ ಆರೋಪಿಯ ಸಂಬಂಧಿಕರಾದ ಚಿಕ್ಕಮುನಿಯಪ್ಪ ದಿ:07.05.2020ರಂದು ನನ್ನ, ನನ್ನ ತಮ್ಮ ನಾರಾಯಣಸ್ವಾಮಿ, ನನ್ನ ಮಗ ಗುರುರಾಜ, ಮಹೇಶ ಮತ್ತು ಗುರಮ್ಮರವರ ವಿರುದ್ದ ದೂರು ದಾಖಲು ಮಾಡಿದ್ದು ಕ್ರೈಂ ನಂ.35-2020ರಲ್ಲಿ ವಿಶ್ವನಾಥಪುರ ಪೋಲಿಸ್ ಠಾಣೆಯಲ್ಲಿ ದಾಖಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲೂ ಸಹ ದೊ.ಪಟ್ಟಿಯನ್ನು ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ಸರ್ವೆ ನಂಬರ್ 47-2ರ ನಾಲ್ಕು ಗುಂಟೆ ಜಮೀನು ಮುನಿಯಪ್ಪ, ಅಮ್ಮಯ್ಯಕ್ಕ, ವೆಂಕಟಸ್ವಾಮಿ, ಭಾಗ್ಯಮ್ಮರವರ ಹೆಸರಿನಲ್ಲಿದ್ದು ಮುನಿಶಾಮಪ್ಪ ಮತ್ತು ಗೌರಮ್ಮರವರ ಹೆಸರಿಗೆ ಜಿಪಿಎ ಮಾಡಿಕೊಟ್ಟಿದ್ದು ಸದರಿ ಜಿಪಿಎ ಆಧಾರದಲ್ಲಿ ಮುನಿಶಾಮಪ್ಪ ದಿ:30.10.2009ರಂದು ತನ್ನ

ಪತ್ನಿ ಲಕ್ಕಮ್ಮರವರ ಹೆಸರಿಗೆ ಆಸ್ತಿ ವರ್ಗಾವಣೆ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಮುನಿಯಪ್ಪ ನನ್ನ ಹೆಸರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದು ನನ್ನ ತಮ್ಮ ನಾರಾಯಣಸ್ವಾಮಿ ಕ್ರಯಪತ್ರಕ್ಕೆ ಸಾಕ್ಷಿದಾರರಾಗಿದ್ದಾರೆ ಎಂದರೆ ಗೊತ್ತಿಲ್ಲ. ಮುನಿಶಾಮಪ್ಪರವರ ಪತ್ನಿ ಲಕ್ಕಮ್ಮ, ಮುನಿಯಪ್ಪ, ವೆಂಕಟಸ್ವಾಮಿ ಮತ್ತು ನನ್ನ ವಿರುದ್ಧ ಅಸಲುದಾವೆ ಸಂಖ್ಯೆ 668-2011 ದೇವನಹಳ್ಳಿ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

6ನೇ ಆರೋಪಿ ಶಾಂತಕುಮಾರ 15ನೇ ಆರೋಪಿ ವೆಂಕಟಪ್ಪ ಮತ್ತು 16ನೇ ಆರೋಪಿ ನಾರಾಯಣಸ್ವಾಮಿರವರ ತಂದೆಯ ಹೆಸರು ವೆಂಕಟೇಶಪ್ಪ. ವೆಂಕಟೇಶಪ್ಪರವರ ತಾಯಿ ಹನುಮಕ್ಕ ಎಂದರೆ ಗೊತ್ತಿಲ್ಲ. ಹನುಮಕ್ಕರವರಿಗೆ ಮುನಿವೆಂಕಟಮ್ಮ ಎಂಬ ಸಹೋದರಿ ಇದ್ದ ವಿಚಾರ ಗೊತ್ತಿಲ್ಲ. ಮುನಿವೆಂಕಟಮ್ಮರವರಿಗೆ ಕೃಷ್ಣಪ್ಪ ಎಂಬ ಮಗ ಇರುವುದರ ಬಗ್ಗೆ ಗೊತ್ತಿಲ್ಲ. ಕೃಷ್ಣಪ್ಪರವರು ಕೃಷ್ಣಮ್ಮರವರನ್ನು ವಿವಾಹವಾಗಿದ್ದು ಅವರಿಗೆ ರಾಜಣ್ಣ ಎಂಬ ಮಗ ಇರುವ ವಿಚಾರ ಗೊತ್ತು ಸಾಕ್ಷಿ ನಾವೆಲ್ಲರೂ ಚೆನ್ನಾಗಿದ್ದೇವೆ ಎಂದು ಉತ್ತರಿಸಿರುತ್ತಾರೆ. ಕೃಷ್ಣಮ್ಮರವರಿಗೆ ಚಿನ್ನಪ್ಪ ಎಂಬ ಸಹೋದರ ಇದ್ದ ವಿಚಾರ ಗೊತ್ತು.

ರಾಜಣ್ಣ ಚಿನ್ನಪ್ಪರವರ ದತ್ತುಮಗ ಎಂದರೆ ಸರಿಯಲ್ಲ. ಚಿನ್ನಪ್ಪನಿಗೆ ದ್ಯಾವರಹಳ್ಳಿಯಲ್ಲಿ ಸರ್ಕಾರದಿಂದ ಸರ್ವೆ ನಂಬರ್ 21ರಲ್ಲಿ 2 ಎಕರೆ 20 ಗುಂಟೆ ಮಂಜುರಾಗಿತ್ತು. ಸದರಿ ಆಸ್ತಿಗೆ ಸಂಬಂಧಿಸಿದಂತೆ ಚಿನ್ನಪ್ಪರವರ ಹೆಸರು ತೆಗೆದುಹಾಕಿ ನನ್ನ ಹೆಸರನ್ನು ದಾಖಲಾತಿಯಲ್ಲಿ ನಮೂದು ಮಾಡಬೇಕು ಎಂದು ಆರ್‌ಯುಸಿ ನಂ.41-2003-04ರಲ್ಲಿ ಪ್ರಕರಣ ದಾಖಲು ಮಾಡಿದ್ದೆ ಎಂದರೆ ಸರಿಯಲ್ಲ. ನಾನು ದಿ:04.12.2007ರಂದು ಚಿನ್ನಪ್ಪರವರ ದತ್ತುಮಗ ಎಂದು ವಿಭಾಗ ಪತ್ರದಲ್ಲಿ ನಮೂದು ಮಾಡಿ ಸರ್ವೆ ನಂಬರ್ 21ರಲ್ಲಿ 2 ಎಕರೆ 20 ಗುಂಟೆ ನನ್ನ ಭಾಗಾಂಶ ಎಂದು ಸುಳ್ಳು ದಾಖಲಾತಿ ತಯಾರು ಮಾಡಿದ್ದೆ ಎಂದರೆ ಗೊತ್ತಿಲ್ಲ. ವಿಭಾಗಪತ್ರದ ಆಧಾರದಲ್ಲಿ

ಎಂಆರ್ 33-2010-11ರ ಅನ್ವಯ ಕಂದಾಯ ದಾಖಲಾತಿಗಳನ್ನು ನನ್ನ ಹೆಸರಿಗೆ ಬದಲಾವಣೆ ಮಾಡಿಕೊಂಡಿದ್ದೆ ಎಂದರೆ ಸರಿ. ಚಿನ್ನಪ್ಪ ನಾನು ಖಾತೆ ಬದಲಾವಣೆ ಮಾಡಿಕೊಂಡ ನಂತರ ನನ್ನ ವಿರುದ್ದ ಎಸಿ ನ್ಯಾಯಾಲಯದಲ್ಲಿ ಅಪೀಲು ದಾಖಲು ಮಾಡಿದ್ದ ವಿಚಾರ ಗೊತ್ತಿಲ್ಲ.

ಎಸಿ ನ್ಯಾಯಾಲಯದಲ್ಲಿ ಚಿನ್ನಪ್ಪರವರ ಪರ ಆದೇಶ ಆದ ನಂತರ ನಾನು ಓ ಎಸ್ 447-2011ನ್ನು ಚಿನ್ನಪ್ಪ ಮತ್ತು ಕೃಷ್ಣಮ್ಮರವರ ವಿರುದ್ದ ದೇವನಹಳ್ಳಿ ನ್ಯಾಯಾಲಯದಲ್ಲಿ ದಾವೆ ದಾಖಲು ಮಾಡಿದ್ದೆ ಎಂದರೆ ಗೊತ್ತಿಲ್ಲ. ಚಿನ್ನಪ್ಪ ಸರ್ವೆ ನಂ.21ರ ಆಸ್ತಿಯನ್ನು ತನ್ನ ಸಾಕುಮಗ ರಾಜಣ್ಣರವರ ಹೆಸರಿಗೆ ವಿಲ್ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಮತ್ತು ತಾಯಿ ಸರ್ವೆ ನಂಬರ್ 21ರ ಆಸ್ತಿಯನ್ನು ಬ್ಯಾಂಕ್ ಆಫ್ ಇಂಡಿಯಾದಲ್ಲಿ ಅಡಮಾನ ಮಾಡಿ ಸಾಲ ಪಡೆದ ದಾಖಲಾತಿಗೆ ನಾನು ಸಹಿ ಮಾಡಿದ್ದೆನೋ ಇಲ್ಲವೋ ಗೊತ್ತಿಲ್ಲ. ದಿ:13.07.2009ರಂದು ಸರ್ವೆ ನಂಬರ್ 21 ಮತ್ತು ಇತರೆ ಆಸ್ತಿಯನ್ನು ಅಡಮಾನ ಮಾಡಿ ಹತ್ತು ಲಕ್ಷ ರೂಪಾಯಿಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಸಾಲವನ್ನು ಪಡೆದಿದ್ದೆವು ಎಂದರೆ ಸರಿ.

ದಿ:03.11.2009ರಂದು ನನ್ನ ತಾಯಿ ಸರ್ವೆ ನಂಬರ್ 21ರ ಆಸ್ತಿಯನ್ನು ಸಿಂಡಿಕೇಟ್ ಬ್ಯಾಂಕ್‌ಗೆ ಅಡಮಾನ ಮಾಡಿ ಸಾಲ ಪಡೆದಿದ್ದು ನಾನು, ನನ್ನ ತಮ್ಮ ನಾರಾಯಣಸ್ವಾಮಿ ಸಾಕ್ಷಿಗಳಾಗಿ ಸಹಿ ಸಾಲ ಪಡೆದಿರುತ್ತೇವೆ ಎಂದರೆ ಸಾಲ ಪಡೆದು ತೀರಿಸಿರುತ್ತೇವೆ ಎಂದು ನುಡಿದಿರತ್ತಾರೆ.

ಮೃತ ದೊಡ್ಡಚಿನ್ನಪ್ಪರವರ ಪತ್ನಿ ಪ್ರಾಸಾ-1 ಮುನಿಕೃಷ್ಣಪ್ಪ, ಪ್ರಾಸಾ-3 ಮಂಜುನಾಥ, ನನ್ನ ತಾಯಿ, ನನ್ನ ತಂಗಿ ಮತ್ತು ನನ್ನ ತಮ್ಮ ನಾರಾಯಣಸ್ವಾಮಿ ಹಾಗೂ ನನ್ನ ವಿರುದ್ದ ಸರ್ವೆ ನಂಬರ್ 21ರ ಆಸ್ತಿ ಭಾಗಾಂಶ ಕೋರಿ ಓ ಎಸ್ 865-2015ನ್ನು ದೇವನಹಳ್ಳಿ

ನ್ಯಾಯಾಲಯದಲ್ಲಿ ದಾಖಲು ಮಾಡಿರುವ ವಿಚಾರ ಗೊತ್ತಿಲ್ಲ. ನಾರಾಯಣಗೌಡರವರ ಮಗ ಎ ಎನ್ ಬೈರೇಗೌಡ, ನನ್ನ ತಾಯಿ, ನನ್ನ ತಮ್ಮ, ನನ್ನ ಮಗ, ನನ್ನ ತಂಗಿ, ಮತ್ತು ನನ್ನ ವಿರುದ್ದ ಓ ಎಸ್ ನಂ.816-2014ನ್ನು ಸುಳ್ಳು ದಾಖಲಾತಿ ತಯಾರು ಮಾಡಿಕೊಂಡಿರುವ ಬಗ್ಗೆ ದಾವೆ ದಾಖಲು ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ.

ನನ್ನ ತಂದೆ ಮತ್ತು ದೊಡ್ಡ ಚಿನ್ನಪ್ಪರವರ ಮಧ್ಯೆ ನನ್ನ ತಾತನ ಆಸ್ತಿ ವಿಭಾಗವಾಗಿತ್ತೊ ನನಗೆ ಗೊತ್ತಿಲ್ಲ. ನನ್ನ ತಾತನ ಆಸ್ತಿ ಯಾವ ಸರ್ವೆ ನಂಬರ್‌ನಲ್ಲಿ ಎಷ್ಟು ವಿಸ್ತೀರ್ಣದ ಯಾವ ಸ್ಥಳದಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗಾಗಿ ಕಾಲಾವಕೋಶ ಕೋರಿದ್ದು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಪ್ರಶೀಲಾ ಕುಮಾರಿ ಜಿ ಎಸ್)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ , ಬೆಂಗಳೂರು.